155-72-7

(7)

(76)

05/03/2024

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರು ನಿಯಮ-72ರಡಿಯಲ್ಲಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ:-** ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಯ ಗುಜರಿ ಮಾರಾಟದಲ್ಲಿ 14 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಬಹುಕೋಟಿ ಹಗರಣ ಹಾಗೂ ಈ ಬಗ್ಗೆ ತನಿಖೆಯ ವಿಳಂಬದೋರಣೆ ಕುರಿತಂತೆ ಉಡುಪಿ ಜಿಲ್ಲಾ ರೈತ ಸಂಘದವರು ಹಾಗೂ ಅನೇಕ ಸಂಘಟನೆಗಳು ಆಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಆಡಳಿತ ಮಂಡಳಿಯ ಅವ್ಯವಹಾರ ಹಾಗೂ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳುವ ವಿಷಯದ ಕುರಿತು ಚರ್ಚಿಸುವ ಅನಿವಾರ್ಯತೆಯ ಬಗ್ಗೆ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

**ಸರ್ಕಾರದ ಉತ್ತರ:-**

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ- ಉಡುಪಿ ಜಿಲ್ಲೆ – ಈ ಕಾರ್ಖಾನೆಯ ಗುಜರಿ ವಸ್ತುಗಳ ಮಾರಾಟದಲ್ಲಿ ರೂ.14.00 ಕೋಟಿಗಳಿಗೂ ಹೆಚ್ಚಿನ ವಂಚನೆಯನ್ನು ಎಸಗಲಾಗಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದವರ ಮೇಲೆ ಮತ್ತು ಸರ್ಕಾರದ ಕಾಯಿದೆ, ನಿಯಮ ಮತ್ತು ಬೈಲಾಗಳನ್ನು ದುರುದ್ದೇಶದಿಂದ ಉಲ್ಲಂಘಿಸಿರುವ ಕುರಿತು ಸೂಕ್ತ ತನಿಖೆಯನ್ನು ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ ಶ್ರೀ ವಿನಯ್‌ಕುಮಾರ್ ಸೊರಕೆ, ಮಾಜಿ ಸಚಿವರು ಹಾಗೂ ಪ್ರಧಾನ ಕಾರ್ಯದರ್ಶಿ, ಉಡುಪಿ ಜಿಲ್ಲಾ ರೈತ ಸಂಘ, ಉಡುಪಿ ಜಿಲ್ಲೆ ಮತ್ತು ಶ್ರೀ ಮಂಜುನಾಥ ಭಂಡಾರಿ, ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತು ಇವರು ದಿನಾಂಕ:25.09.023 ಮತ್ತು 09.11.2023ರಂದು ಸರ್ಕಾರಕ್ಕೆ ಮನವಿ ಮತ್ತು ದೂರುಗಳನ್ನು ಸಲ್ಲಿಸಿದ್ದರು.

ಮೇಲ್ಕಂಡ ದೂರು ಮತ್ತು ಮನವಿಗಳಲ್ಲಿ ಪ್ರಮುಖವಾಗಿ ಈ ಕೆಳಕಂಡ ಆರೋಪಗಳನ್ನು ಮಾಡಲಾಗಿತ್ತು.

A) ಕಾರ್ಖಾನೆಯು ಹಳೆಯ ಯಂತ್ರೋಪಕರಣ ಸ್ಕ್ರ್ಯಾಪ್ ಮಾರಾಟ ಮಾಡಿದಾಗ ನಿಯಮಾನುಸಾರ ಕಾರ್ಖಾನೆಯಿಂದ ಇ-ವೇ-ಬಿಲ್ಲುಗಳನ್ನು ಜನರೇಟ್ ಮಾಡಲಾಗಿರುವುದಿಲ್ಲ ಹಾಗೂ ಕಾರ್ಖಾನೆಯಿಂದ ಗೇಟ್ ಪಾಸ್‌ಗಳನ್ನು ಸಹ ವಿತರಣೆ ಮಾಡಿರುವುದಿಲ್ಲ.

B) ಯಾವ ಯಾವ ಯಂತ್ರೋಪಕರಣ ಸ್ಕ್ರ್ಯಾಪ್ ಮಾರಾಟ ಮಾಡಲಾಗಿದೆ ಎಂಬ ಬಗ್ಗೆ, ಅವುಗಳ ಪರಿಮಾಣ, ತೂಕದ ವಿವರ, ದಾಸ್ತಾನುಗಳ ಪಟ್ಟಿಯು ದಾಸ್ತಾನು ವಹಿಯಲ್ಲಿ ಲಭ್ಯವಿರುವುದಿಲ್ಲ.

C) ಪ್ರತಿ ಲೋಡ್ ತೆಗೆದುಕೊಂಡು ಹೋದ ಬಗ್ಗೆ ಖರೀದಿದಾರರೇ ಇ-ವೇ ಬಿಲ್ಲು ಮಾಡಿರುವುದು ಕಂಡು ಬಂದಿರುತ್ತದೆ.

D) ಕಾರ್ಖಾನೆಯಿಂದ ತೆಗೆದುಕೊಂಡು ಹೋದ ತೂಕದ ಪರಿಮಾಣದ ವೇಯಿಂಗ್ ಸ್ಲಿಪ್ ಸಹ ಕಾರ್ಖಾನೆಯಲ್ಲಿ ಲಭ್ಯವಿರುವುದಿಲ್ಲ.

E) ಟೆಂಡರ್ ಕರಾರಿನಂತೆ ಖರೀದಿದಾರರಿಂದ ಬ್ಯಾಂಕ್ ಗ್ಯಾರಂಟಿ ಪಡೆದಿರುವುದಿಲ್ಲ.

F) ಖರೀದಿದಾರರಿಂದ ನಿಯಮಾನುಸಾರ ಜಿ.ಎಸ್.ಟಿ ಕಟಾಯಿಸಿರುವುದಿಲ್ಲ.

G) ಸಂಘದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವುದಿಲ್ಲ.

....2

H) ಸಂಘದ ಆಡಳಿತ ಮಂಡಳಿಯು 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಪೂರ್ಣಗೊಳಿಸದೇ 2021-22 ಮತ್ತು 2022-23ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಲು ವಿಫಲರಾಗಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 29 ಸಿ ರೀತ್ಯಾ ಆಡಳಿತ ಮಂಡಳಿ ಕರ್ತವ್ಯ ಲೋಪವೆಸಗಿರುತ್ತದೆ.

i) ಕಾರ್ಖಾನೆಯ ಯಂತ್ರೋಪಕರಣಗಳ ಹಾಗೂ ಕಟ್ಟಡ ಮಾರಾಟದಲ್ಲಿ ಅವ್ಯವಹಾರ ನಡೆದಿದ್ದು ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಮಾರಾಟದಲ್ಲಿ ಪಾರದರ್ಶಕ ಅಧಿನಿಯಮ ಅನುಸರಿಸಿರುವುದಿಲ್ಲವೆಂದು ಹಾಗೂ ಹಳೆಯ ಯಂತ್ರೋಪಕರಣಗಳ ಮಾರಾಟದ ನಂತರ ಅಗತ್ಯಕ್ಕಿಂತ ಹೆಚ್ಚಾಗಿ ಇ-ವೇಬಿಲ್ ಗೇಟ್ ಪಾಸ್ ನೀಡಿ. ಅಕ್ರಮ ನಡೆಸಲಾಗಿರುತ್ತದೆ ಎಂದು ಹಾಗೂ ಟೆಂಡರ್ ದಾರರಿಂದ ನಿಯಮಾನುಸಾರ ಗ್ಯಾರಂಟಿ ಹಣ ಪಡೆದಿರುವುದಿಲ್ಲವೆಂದು ಹಾಗೂ ಮಾರಾಟ ಮಾಡಲಾದ ವಸ್ತುಗಳ ಬಾಬು ಜಿ.ಎಸ್.ಟಿ. ಪಡೆದಿರುವುದಿಲ್ಲವೆಂದು ತೀವ್ರವಾಗಿ ಆಕ್ಷೇಪಿಸಿ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಲು ದಿನಾಂಕ:25.09.2023 ರಂದು ನಡೆದ ಸಕ್ಕರೆ ಕಾರ್ಖಾನೆಯ ವಾರ್ಷಿಕ ಮಹಾಸಭೆ ಕೋರಲಾಗಿರುತ್ತದೆ.

ಕಾರ್ಖಾನೆಯ ಸ್ಕ್ರಾಪ್ ಹಳೆಯ ಯಂತ್ರೋಪಕರಣಗಳ ಮಾರಾಟದಲ್ಲಿ ನಿಯಮ ಬಾಹಿರವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಕಾರ್ಖಾನೆಗೆ ಆಡಳಿತಾಧಿಕಾರಿ / ವಿಶೇಷಾಧಿಕಾರಿಗಳನ್ನು ನೇಮಿಸುವಂತೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರಡಿ ಶಾಸನಬದ್ಧ ವಿಚಾರಣೆಗೆ ಕ್ರಮ ಕೈಗೊಳ್ಳುವಂತೆ ಸಹಕಾರ ಸಂಘಗಳ ಉಪ ನಿಬಂಧಕರು (ಪ್ರ), ಉಡುಪಿ ಜಿಲ್ಲೆ ಉಡುಪಿ ಇವರು ದಿನಾಂಕ:21.11.2023 ರಂದು ಕೋರಿದ್ದರು.

ಈ ಮಧ್ಯೆ, ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರು ದಿನಾಂಕ:11.06.2024 ರ ಪತ್ರದಲ್ಲಿ ವಿಸ್ಕೃತವಾದ ವರದಿಯನ್ನು ಸಲ್ಲಿಸಿದ್ದು, ಕಾರ್ಖಾನೆಯ ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಸತ್ಯಾಸತ್ಯತೆ ಪರಿಶೀಲನೆ ನಡೆಸಲು ಸಮಿತಿಯನ್ನು ರಚಿಸಿ ಜಂಟಿಯಾಗಿ ಪರಿಶೀಲಿಸಿ ತನಿಖಾ ವರದಿಯನ್ನು ಪಡೆಯಲಾಗಿದ್ದು, ಸದರಿ ಸಮಿತಿಯು ನೀಡಿರುವ ವರದಿಯಂತೆ ಕಾರ್ಖಾನೆಯ ಕಟ್ಟಡ ಮತ್ತು ಯಂತ್ರೋಪಕರಣಗಳ ಟೆಂಡರ್ ಪ್ರಕ್ರಿಯೆಯಲ್ಲಿ ಲೋಪದೋಷಗಳು ಉಂಟಾಗಿರುವುದು ತನಿಖಾ ಹಂತದಲ್ಲಿ ಕಂಡು ಬಂದಿರುತ್ತದೆ ಎಂದು, ಆದ್ದರಿಂದ ಈ ಬಗ್ಗೆ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ತನಿಖಾ ವರದಿಯನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸಲ್ಲಿಸಿದ್ದರು.

ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬ್ರಹ್ಮಾವರ, ಉಡುಪಿ ಜಿಲ್ಲೆ ಇವರ ದಿನಾಂಕ:19.03.2024 ಮತ್ತು 22.08.2024 ರ ಪತ್ರಗಳಲ್ಲಿ, 3 ಜನ ನಿರ್ದೇಶಕರ ರಾಜೀನಾಮೆಯ ಹಿನ್ನಲೆಯಲ್ಲಿ ಆಡಳಿತ ಮಂಡಳಿಯ ಸಭೆಯನ್ನು ನಡೆಸಲು ಕನಿಷ್ಟ ಕೋರಂ ಇಲ್ಲದಿರುವುದರಿಂದ ಕಾರ್ಖಾನೆಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಲು ಕೋರಲಾಗಿತ್ತು.

ಆದ್ದರಿಂದ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ:ಡಿಎಸ್‌ಕೆ/ ಸಿಓಎಫ್/82/2023-24 ದಿನಾಂಕ:05.09.2024ರಲ್ಲಿ, ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಉಡುಪಿ ಇವರನ್ನು ವಿಶೇಷಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿರುತ್ತದೆ ಹಾಗೂ ಆಡಳಿತ ಮಂಡಳಿಯ

ಸದಸ್ಯರುಗಳು ಎಸಗಿರಬಹುದಾದ ಯಾವುದೇ ಲೋಪದೋಷಗಳ ಸಂಬಂಧ ಮುಂದೆ ಅವರುಗಳ ವಿರುದ್ಧ ತೆಗೆದುಕೊಳ್ಳಬಹುದಾದ ಕ್ರಮಗಳಿಗೆ ಬದ್ಧರಾಗತಕ್ಕದ್ದೆಂದು ಸಹ ಆದೇಶಿಸಲಾಗಿದೆ.

ಮುಂದುವರಿದು, ಸರ್ಕಾರದ ಆದೇಶ ಸಂಖ್ಯೆ: ಸಿಐ 313 ಸಿಓಎಫ್ 2023, ದಿನಾಂಕ:20.11.2024 ರಲ್ಲಿ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ, ಉಡುಪಿ ಜಿಲ್ಲೆ – ಈ ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ಶ್ರೀ ರಾಧಾಕೃಷ್ಣ ಹೊಳ್ಳ, ಮಾನ್ಯ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ. ಪ್ರಸ್ತುತ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.

ಈ ಮದ್ಯೆ, ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ- ಉಡುಪಿ ಜಿಲ್ಲೆ – ಈ ಕಾರ್ಖಾನೆಯ ಗುಜರಿ ವಸ್ತುಗಳ ಮಾರಾಟದಲ್ಲಿ ರೂ.14.00 ಕೋಟಿಗಳಿಗೂ ಹೆಚ್ಚಿನ ವಂಚನೆಯನ್ನು ಎಸಗಲಾಗಿದ್ದು, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದವರ ಮೇಲೆ ಮತ್ತು ಸರ್ಕಾರದ ಕಾಯಿದೆ, ನಿಯಮ ಮತ್ತು ಬೈಲಾಗಳನ್ನು ದುರುದ್ದೇಶದಿಂದ ಉಲ್ಲಂಘಿಸಿರುವ ವಿರುದ್ಧ ಸೂಕ್ತ ತನಿಖೆಯನ್ನು ನಡೆಸಲು ಕೋರಿ ಪ್ರಧಾನ ಕಾರ್ಯದರ್ಶಿ, ಉಡುಪಿ ಜಿಲ್ಲಾ ರೈತ ಸಂಘ, ಉಡುಪಿ ಜಿಲ್ಲೆ ಇವರು ದಿನಾಂಕ:25.10.2023ರಂದು ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಅ.ಕ್ರ 203/2023 ಅನ್ನು ದಾಖಲಿಸಿರುತ್ತಾರೆ.

ಸದರಿ ದೂರಿನ ಕುರಿತು ವಿಚಾರಣೆಯನ್ನು ನಡೆಸಲಾಗಿದೆಯೆಂದು ಐ.ಪಿ.ಸಿ ಕಲಂ 420, 405, 415, 418, 463, 464, 465,468, 474, 120(ಬಿ) ಜೊತೆಗೆ 34 ಐ.ಪಿ.ಸಿ & ಕಲಂ 23 Karnataka Transparency in Public procurements Act 1999 ರ ಪ್ರಕರಣದಲ್ಲಿ, ಆಪಾದಿತರುಗಳು ಕಲಂ 120(ಬಿ), 403, 409 ಜೊತೆಗೆ 34, 37 ಐಪಿಸಿ ಹಾಗೂ ಕಲಂ 23 Karnataka Transparency in Public procurements Act 1999 ರಂತೆ ಅಪರಾಧವೆಸಗಿರುವುದು ತನಿಖೆಯಿಂದ ದೃಡಪಟ್ಟಿದ್ದು ಆಪಾದಿತ ಸರಕಾರಿ ನೌಕರ ಪ್ರವೀಣ್ ಬಿ ನಾಯಕ್ ಹಾಗೂ 10 ಮಂದಿ ನಿರ್ದೇಶಕರನ್ನು ನ್ಯಾಯಾಲಯದ ಅಭಿಯೋಜನೆಗೆ ಒಳಪಡಿಸಲು ದೋಷಾರೋಪಣಾ ಪಟ್ಟಿ ಸಲ್ಲಿಸಲು ಸರ್ಕಾರದ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ದೊರಕಿಸಿಕೊಡುವಂತೆ ಮಹಾನಿರ್ದೇಶಕರು ಮತ್ತು ಪೋಲೀಸ್ ಮಹಾನಿರೀಕ್ಷಕರು ಕರ್ನಾಟಕ ರಾಜ್ಯ ಬೆಂಗಳೂರು ಇವರ ದಿನಾಂಕ:14.08.2024ರ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿಗಳು (ಪಿಸಿ.ಎ.ಎಸ್) ಒಳಾಡಳಿತ ಇಲಾಖೆ ಇವರನ್ನು ಕೋರಲಾಗಿರುತ್ತದೆ.

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಅಪರಾಧಗಳು) ಇವರ ದಿನಾಂಕ:23.10.2024ರ ಅನಧಿಕೃತ ಟಿಪ್ಪಣಿಯಲ್ಲಿ, ಅಭಿಯೋಜನಾ ಮಂಜೂರಾತಿಯನ್ನು ನೀಡಲು ಕೋರಿ ಸಲ್ಲಿಸಿದ ಪ್ರಸ್ತಾವನೆಯ ಕುರಿತು ನಿಯಮಾನುಸಾರ ಸೂಕ್ತ ಕ್ರಮವಹಿಸುವಂತೆ ತಿಳಿಸಿ ಸಹಕಾರ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ 11 ಆರೋಪಿಗಳ ಪೈಕಿ ಆರೋಪಿ-01 ಆದ ಶ್ರೀ ಪ್ರವೀಣ್ ಬಿ ನಾಯಕ್, ಸಹಕಾರ ಸಂಘಗಳ ಜಂಟಿ ನಿಬಂಧಕರು ಇವರು ಸಹಕಾರ ಇಲಾಖೆ ಅಧಿಕಾರಿಯಾಗಿರುವುದರಿಂದ ಇವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಸಿಓ 60 ಇಸಿಐ 2025, ದಿನಾಂಕ:27.02.2025ರಲ್ಲಿ ಸಹಕಾರ ಇಲಾಖೆಯಿಂದ ಅಭಿಯೋಜನಾ ಮಂಜೂರಾತಿ ನೀಡಲಾಗಿರುತ್ತದೆ. ಉಳಿದಂತೆ, ಇನ್ನುಳಿದ 10 ಮಂದಿ ಆರೋಪಿತರು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕರುಗಳಾಗಿರುವುದರಿಂದ ಸದರಿಯವರುಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಲು ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ ಸಕ್ಷಮ ಪ್ರಾಧಿಕಾರವಾದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಮುಂದಿನ ಕ್ರಮ ಕೈಗೊಳ್ಳಲು ಕೋರಿ ದಿನಾಂಕ:28.02.2025ರಂದು ಪ್ರಸ್ತಾವನೆಯನ್ನು ಸಹಕಾರ ಇಲಾಖೆಯಿಂದ ವರ್ಗಾಯಿಸಲಾಗಿರುತ್ತದೆ. ಪ್ರಸ್ತುತ ಸದರಿ 10 ನಿರ್ದೇಶಕರುಗಳ ಮೇಲೆ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ 1988ರನ್ವಯ ಈ ಇಲಾಖೆಯಿಂದ ಅಭಿಯೋಜನಾ ಮಂಜೂರಾತಿ ನೀಡಲು ಇರುವ ಅವಕಾಶಗಳ ಕುರಿತು ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದ್ದು ಸದರಿ ಅಭಿಪ್ರಾಯದನ್ವಯ ಮುಂದಿನ ಕ್ರಮವಹಿಸಲಾಗುವುದು.

---

ಸಂಖ್ಯೆ: ಸಿಐ 78 ಸಿಓಎಫ್ 2025

(ಶಿವಾನಂದ ಎಸ್ ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು